## ಅದ್ವೈತ ಸಂಪ್ರದಾಯ

# ಅದ್ವೈತ ಸಿದ್ಧಾಂತ – ಒಂದು ಸಮೀಕ್ಷೆ

**ಡಾ. ಎಚ್. ವಿ. ನರಸಿಂಹಮೂರ್ತಿ**

ಅದ್ವೈತ ಸಿದ್ಧಾಂತದ ಮೇರು ಆಚಾರ್ಯರಾದ ಶ್ರೀಶಂಕರಾ ಚಾರ್ಯರು ಕರ್ನಾಟಕದಲ್ಲಿಯೇ ತಮ್ಮ ಪ್ರಥಮ ಪೀಠವನ್ನು ಸ್ಥಾಪನೆ ಮಾಡಿದರು. ಹೀಗಾಗಿ ಈ ನಾಡು, ಅದ್ವೈತದ ತವರು ಮನೆಯೂ ಆಗಿದೆ. ಈ ಸಿದ್ಧಾಂತದ ಸರಳ ನಿರೂಪಣೆಯನ್ನು ಮಾಡಿರುವ ಮಾನ್ಯ ಲೇಖಕರು, ವಿಶ್ರಾಂತ ಪ್ರಾಧ್ಯಾಪಕರು, ಪ್ರಸಿದ್ಧ ಬರಹಗಾರರು.



**'ವೇದಾಂತ'** ನಮ್ಮ ಪವಿತ್ರ ಭಾರತದ ಅಪೂರ್ವ ಅನರ್ಘ್ಯ ರತ್ನ. ಬೇರೆಲ್ಲ ಭೌತಿಕ ಸಂಪತ್ತುಗಳನ್ನು ಇತರರು ಭಾರತದಿಂದ ಕೊಂಡೊಯ್ಯಬಹುದು; ಆದರೆ ಆರ್ಷ ಸಂಪತ್ತಾದ ವೇದಾಂತವನ್ನು ಯಾರೂ ಅಪಹರಿಸಲಾರರು; ಅದೊಂದು ಅಮೂಲ್ಯ ನಿಧಿ.

ನಾವು ನೋಡುವ, ಅನುಭವಿಸುವ ಈ ಜಗತ್ತು ಎಲ್ಲಿಂದ ಬಂದಿತು? ಯಾರ ಸೃಷ್ಟಿಯಿದು? ನನಗೂ ಈ ಜಗತ್ತಿಗೂ ಇರುವ ಸಂಬಂಧವೇನು? ಇತ್ಯಾದಿ ಜಿಜ್ಞಾಸೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ವೇದಾಂತ ಮಾಡುತ್ತದೆ. ಭೌತಿಕ ಜಗತ್ತಿಗೆ ಹೊರತಾಗಿ ಅಧ್ಯಾತ್ಮ ಜಗತ್ತೊಂದಿದೆ ಎಂಬ ಅರಿವನ್ನು ಮೂಡಿಸುವುದೇ ವೇದಾಂತದ ಗುರಿ. ಚರಾಚರ ಜಗತ್ತಿಗೆ ಮೂಲವಾದ 'ಬ್ರಹ್ಮ' ಎಂಬ ತತ್ತ್ವವಿದೆ. ಅದೇ ಪರಮತತ್ತ್ವ, ಪರಮಾರ್ಥವೂ ಅದೇ ಆಗಿರುತ್ತದೆ. 'ಬ್ರಹ್ಮ ಒಂದೇ ಸತ್ಯ; ಕಾಣುವ ಈ ಜಗತ್ತು ಮಿಥ್ಯ' ಎಂಬ ರಹಸ್ಯವನ್ನು ವೇದಾಂತ ತಿಳಿಸುತ್ತದೆ. ಈ ಬ್ರಹ್ಮವನ್ನು ಅರಿತಾಗಲೇ ಸಂಸಾರದ ಬಂಧನದಿಂದ ಮುಕ್ತಿ ಸಾಧ್ಯ.

"ನಾನು ಯಾವಾಗಲೂ ಸುಖಿಯಾಗಿರಬೇಕು. ನನಗೆಂದೂ ದುಃಖ ಬರಬಾರದು" ಎಂಬುದು ಎಲ್ಲರ ಆಕಾಂಕ್ಷೆ. ಸುಖ ಕ್ಕಾಗಿಯೇ ಮನುಷ್ಯನು ನಿರಂತರ ಯತ್ನಿಸುತ್ತಾನೆ; ಕಷ್ಟಪಡುತ್ತಾನೆ. ಭ್ರಮರವೊಂದು ಮಕರಂದಕ್ಕಾಗಿ ಹೂವಿನಿಂದ ಹೂವಿಗೆ ಹಾರಾಡು ವಂತೆ ಮಾನವನ ಮನಸ್ಸು ಸುಖವನ್ನು ಲೌಕಿಕ ವಸ್ತುಗಳಲ್ಲಿ ಹುಡುಕುತ್ತಾ, ಕೊನೆಗೂ ನಿಜವಾದ ಸುಖವನ್ನು ಹೊಂದದೇ ಬಳಲುತ್ತದೆ. ಆದರೆ, 'ಸುಖ ಹೊರಗಿನ ವಸ್ತುಗಳಲ್ಲಿಲ್ಲ. ಅದು ಅಂತರಾತ್ಮನಲ್ಲೇ ಇದೆ. ಬ್ರಹ್ಮಸಾಕ್ಷಾತ್ಕಾರದಿಂದಲೇ ನಿರತಿಶಯ ಆನಂದ ಲಭ್ಯ' ಎನ್ನುವುದನ್ನು ವೇದಾಂತ ಸ್ಪಷ್ಟಪಡಿಸುತ್ತದೆ.

ಇಂತಹ ವೇದಾಂತ ಪರಂಪರೆಯಲ್ಲಿ ಅದ್ವೈತ ಸಿದ್ಧಾಂತ ಭಾರತದಲ್ಲಿ ಮಾತ್ರವಲ್ಲ, ಜಗತ್ತಿನಾದ್ಯಂತ ಮಾನ್ಯವಾಗಿದೆ. ಎಂದಿಗೂ ಅದರ ಶ್ರೇಷ್ಠತೆಗೆ ಚ್ಯುತಿಯುಂಟಾಗಲು ಸಾಧ್ಯವಿಲ್ಲ.

### ಅದ್ವೈತವೆಂದರೇನು?

'ಅದ್ವೈತ' ಎಂದರೆ 'ಎರಡಲ್ಲದ್ದು' ಅಥವಾ 'ಒಂದೇ ಇರುವಿಕೆ' ಎಂದರ್ಥ. ಅಂದರೆ ಉಪನಿಷತ್ತುಗಳು ಸಾರುವಂತೆ 'ಬ್ರಹ್ಮವೆಂಬ ವಸ್ತು ಒಂದೇ ಇರುವುದು' ಎಂದು ಹೇಳಿದ ಹಾಗಾಯಿತು. ಅರ್ಥಾತ್ ನಮಗೆ ಕಾಣಿಸುವ ಜಗತ್ತು ಭ್ರಮೆ. ಇದರ ಮೂಲ ರೂಪ ಬೇರೆಯೇ ಇದೆ. ಅದು ಮನಸ್ಸು–ಇಂದ್ರಿಯಗಳಿಗೆ ಗೋಚರವಾಗದ ತತ್ತ್ವ, ಅದೇ ಬ್ರಹ್ಮ. 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ', 'ಏಕಮೇವಾದ್ವಿತೀಯಂ ಬ್ರಹ್ಮ', 'ನೇಹ ನಾನಾಸ್ತಿ ಕಿಂಚನ' ಇತ್ಯಾದಿ ಶ್ರುತಿವಾಕ್ಯಗಳ ಆಧಾರದಿಂದ ಪರಬ್ರಹ್ಮವೊಂದೇ ನಿತ್ಯಸತ್ಯ ಎಂದು ಪರಿಗಣಿಸಬೇಕು. ಮತ್ತೆಲ್ಲವೂ ಇರುವಂತೆ ಭಾಸವಾಗುತ್ತವೆ. ಅವು ಸತ್ತೂ ಅಲ್ಲ; ಅಸತ್ತೂ ಅಲ್ಲ; ಸದಸತ್ತೂ ಅಲ್ಲದ ಅನಿರ್ವಚನೀಯ. ಇದನ್ನೇ **ವಿವರ್ತ** ಎಂದು ಕರೆಯುವುದು. ಹಗ್ಗವನ್ನು ಹಾವೆಂದು ತಿಳಿಯುವಂತೆ ಈ ಜಗತ್ತು ಕಾಣಿಸುತ್ತದೆ ಎಂಬ ಉಪನಿಷತ್ ಪ್ರತಿಪಾದಿತವಾದ ಅದ್ವೈತ ತತ್ತ್ವವನ್ನು ಶ್ರೀಶಂಕರಾಚಾರ್ಯರು ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳೆಂಬ ಪ್ರಸ್ಥಾನತ್ರಯಕ್ಕೆ ಭಾಷ್ಯ ಬರೆಯುವ ಮೂಲಕ ಜಗತ್ತಿಗೆ ಸಾರಿದರು. ಇತರ ಮತಗಳನ್ನು ಖಂಡಿಸಿ, ತಮ್ಮ ಮತವನ್ನು ಸಮರ್ಥಿಸುವಲ್ಲಿ ಶ್ರೀಶಂಕರರ ಪ್ರತಿಭೆ ಪರಿಪೂರ್ಣವಾಗಿ ಅಭಿವ್ಯಕ್ತವಾಗಿದೆ. ಅವರು ಇದಕ್ಕಾಗಿ ಬಳಸುವ ಉಕ್ತಿಯುಕ್ತಿಗಳು ಸತ್ಯಾನ್ವೇಷಣೆಗಾಗಿಯೇ ಹೊರಟಿವೆ.

ಜನರ ಅಭ್ಯುದಯ ನಿಃಶ್ರೇಯಸಗಳು ಸತ್ಯವನ್ನೇ ಅವಲಂಬಿಸಿವೆ ಎನ್ನುವುದು ನಿಸ್ಸಂದೇಹ.

ವ್ಯಕ್ತಿ–ವ್ಯಕ್ತಿಗಳಲ್ಲಿ, ವಸ್ತು–ವಸ್ತುಗಳಲ್ಲಿ ನಮಗೆ ಪ್ರತಿಕ್ಷಣದಲ್ಲೂ ಭೇದವೇ ತೋರಿ ಬರುತ್ತಿರುವಾಗ, ಅನಾದಿಕಾಲದಿಂದ ಬಂದ ಈ ಸಂಸಾರ ನಿತ್ಯ ಮತ್ತು ಸತ್ಯ ಎಂಬ ಅನುಭವವಿರುವಾಗ ಅದ್ವೈತವನ್ನು ಸ್ಥಾಪಿಸುವುದು ಅಸಾಮಾನ್ಯವಾದ ಕಾರ್ಯ. ದ್ವೈತದಲ್ಲಿ ವ್ಯವಹರಿಸುವ ಎಲ್ಲ ಜನರನ್ನೂ ಅದ್ವೈತದತ್ತ ಸೆಳೆದುಕೊಂಡ ಹಾಗೂ ದ್ವೈತವನ್ನು ಪ್ರತಿಪಾದಿಸುವ ಇತರ ಶಾಸ್ತ್ರಕಾರರನ್ನು ಸಮರ್ಥವಾಗಿ ಎದುರಿಸಿದ ಅಸಾಧಾರಣ ಪಾಂಡಿತ್ಯ ಶ್ರೀಶಂಕರ ಭಗವತ್ಪಾದರದು. ಆದ್ದರಿಂದಲೇ ಇದೇ ತಳಹದಿಯ ಮೇಲೆ ಇಂದಿನ ವೈಜ್ಞಾನಿಕ ಯುಗದಲ್ಲೂ ಅದ್ವೈತಸಿದ್ಧಾಂತವು ಪ್ರಸಿದ್ಧಿ ಹೊಂದುತ್ತಾ ಅಚ್ಚಳಿಯದೆ ಉಳಿದಿದೆ.

'ನಾನು' ಎಂಬ ವ್ಯವಹಾರದಿಂದಲೇ 'ಆತ್ಮ' ಸ್ವಯಂಸಿದ್ಧನಾಗುತ್ತಾನೆ. ಪ್ರಪಂಚದಲ್ಲಿ 'ನಾನು ಇಲ್ಲ' ಎಂಬ ವ್ಯವಹಾರ ಇಲ್ಲವಷ್ಟೆ? ಆತ್ಮ ಒಬ್ಬ ಇದ್ದಾನೆಯೆ? ಅಥವಾ ಇಲ್ಲವೆ? ಎಂಬ ಚರ್ಚೆಗಳಿಗೆ ಇಲ್ಲಿ ಆಸ್ಪದವೇ ಇಲ್ಲ.

ಚಾರ್ವಾಕರು ದೇಹಕ್ಕಿಂತ ಭಿನ್ನವಾದ ಆತ್ಮನನ್ನು ಒಪ್ಪುವುದಿಲ್ಲ. ಇಂದ್ರಿಯ ಅಥವಾ ಮನಸ್ಸು 'ಆತ್ಮ' ಎಂಬುದು ಕೆಲವರ ವಾದ. ದೇಹ, ಇಂದ್ರಿಯ, ಮನಸ್ಸುಗಳಿಗಿಂತ ಭಿನ್ನವಾಗಿ ಚೈತನ್ಯರೂಪಿ 'ಆತ್ಮ' ಇದ್ದಾನೆ. ಸಮಾಧಿಯಲ್ಲಿ ಅದರ ಅರಿವು ಚೆನ್ನಾಗಿ ಆಗುತ್ತದೆ.

**ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ** – ಈ ಮೂರೂ ಅವಸ್ಥೆಗಳು ನಮಗೆ ತಿಳಿಯುತ್ತವೆ. ಜಾಗ್ರತ್ತಿನಲ್ಲಿ ಹೊರಗಿನ ವಸ್ತುಗಳು ಅರಿವಿಗೆ ಬರುತ್ತವೆ. ಸ್ವಪ್ನದಲ್ಲಿ ಆಂತರಿಕ ಕಲ್ಪನೆಗಳು ಮೂಡಿಬರುತ್ತವೆ. ಸುಷುಪ್ತಿಯಲ್ಲಿ ಶುದ್ಧ ಅರಿವು ಇರುತ್ತದೆ. ಆದ್ದರಿಂದಲೇ ಗಾಢ ನಿದ್ರೆಯಿಂದ ಎಚ್ಚೆತ್ತ ವ್ಯಕ್ತಿ, 'ಚೆನ್ನಾಗಿ ನಿದ್ರಿಸಿದೆನು' ಎನ್ನುತ್ತಾನೆ. ನಿದ್ರಿಸುವಾಗಲೂ ಜ್ಞಾನ ಅಥವಾ ಚೈತನ್ಯ ಇರುತ್ತದೆ ಎನ್ನುವುದು ಇದರಿಂದ ತಿಳಿಯುತ್ತದೆ.

ಆತ್ಮನ ಅಸ್ತಿತ್ವ ಸ್ವಯಂಸಿದ್ಧ ಎಂದ ಮೇಲೆ ಬ್ರಹ್ಮತತ್ತ್ವವೂ ಸ್ವಯಂಸಿದ್ಧವೇ. ಏಕೆಂದರೆ ಅದ್ವೈತಸಿದ್ಧಾಂತದ ಪ್ರಕಾರ 'ಆತ್ಮ' ಮತ್ತು 'ಬ್ರಹ್ಮ' ರ ನಡುವೆ ಯಾವ ಭೇದವೂ ಇಲ್ಲ. ಇದನ್ನೇ **'ಆತ್ಮಾ ಚ ಬ್ರಹ್ಮ', 'ಸರ್ವಂ ಖಲ್ವಿದಂ ಬ್ರಹ್ಮ', 'ಬ್ರಹ್ಮವಿದಾಪ್ನೋತಿ ಪರಂ'** ಮೊದಲಾದ ಶ್ರುತಿವಾಕ್ಯಗಳು ಪ್ರತಿಪಾದಿಸಿ, ಅದ್ವೈತ ಸಂಪ್ರದಾಯಕ್ಕೆ ಭದ್ರವಾದ ಬುನಾದಿಯನ್ನು ಒದಗಿಸಿವೆ.

**ಆಧುನಿಕ ವಿಜ್ಞಾನದ ಆವಿಷ್ಕಾರಗಳನ್ನು ನೈತಿಕ ಮತ್ತು ಭೌತಿಕ ಕ್ಷೇತ್ರಗಳಲ್ಲಿ ಒಪ್ಪಿಕೊಂಡು, ಕೆಲವು ವೇಳೆ ಅದಕ್ಕಿಂತಲೂ ಮುಂದು ಹೋದಿರುವ ಧರ್ಮವೆಂದರೆ ಅದ್ವೈತವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಆದಕಾರಣವೇ ಅದು ಆಧುನಿಕ ವಿಜ್ಞಾನಿಗಳ ಮೆಚ್ಚುಗೆಗೆ ಪಾತ್ರವಾಗಿದೆ.**

**–ಸ್ವಾಮಿ ವಿವೇಕಾನಂದ**

## ಅದ್ವೈತ ಸಾಹಿತ್ಯ

ಸಂಸ್ಕೃತವಾಙ್ಮಯದ ವೈದಿಕ ಮತ್ತು ಲೌಕಿಕ ಸಾಹಿತ್ಯಗಳಲ್ಲೆಲ್ಲ ಅದ್ವೈತಸಿದ್ಧಾಂತ ನಿಚ್ಚಳವಾಗಿ ಮೂಡಿಬಂದಿದೆ. **'ಏಕಂ ಸಂತಂ ಬಹುಧಾ ಕಲ್ಪಯಂತಿ'** (ಒಬ್ಬನನ್ನೇ ಅನೇಕ ಬಗೆಯಾಗಿ ಕಲ್ಪನೆ ಮಾಡುತ್ತಾರೆ), **'ಪುರುಷ ಏವೇದಂ ಸರ್ವಂ'** (ಇವೆಲ್ಲವೂ ಪುರುಷನೇ), **'ಇಮಾ ಚ ವಿಶ್ವಾ ಭುವನಾನ್ಯಸ್ಯ'** (ಸಕಲ ಚರಾಚರ ಜಗತ್ತು ಅವನಲ್ಲದೆ ಬೇರೆಯಲ್ಲ), **'ಏಕಂ ಸದ್ವಿಪ್ರಾ ಬಹುಧಾ ವದಂತಿ'** (ಒಂದೇ ಇರುವುದನ್ನು ಜ್ಞಾನಿಗಳು ವಿಧವಿಧವಾಗಿ ವರ್ಣಿಸುತ್ತಾರೆ) – ಇವೇ ಮೊದಲಾದ ಶ್ರುತಿ ವಾಕ್ಯಗಳು ಅದ್ವೈತ ಸಂಪ್ರದಾಯದ ಬ್ರಹ್ಮೈಕ ತತ್ತ್ವವನ್ನು ಸೂಚಿಸುತ್ತವೆ.

ಪ್ರಸ್ಥಾನತ್ರಯಗಳಲ್ಲಿ ಪ್ರಮುಖವಾದ ಉಪನಿಷತ್ತುಗಳು, **'ಶಿವಂ ಶಾಂತಂ ಅದ್ವೈತಂ'** (ಶಿವ, ಶಾಂತ, ಎರಡಿಲ್ಲದ್ದು) **'ಏಕಮೇವ ಅದ್ವಿತೀಯಂ'** (ಒಂದೇ ಒಂದು, ಎರಡಿಲ್ಲದ್ದು), **'ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ'** (ಏಕತ್ವವನ್ನು ನೋಡುವವನಿಗೆ ಶೋಕ ಮೋಹಗಳೆಲ್ಲಿಯವು?), **'ಸರ್ವಮೇತತ್ ಬ್ರಹ್ಮ; ಅಯಮಾತ್ಮಾ ಬ್ರಹ್ಮ'** (ಈ ಜಗತ್ತು ಬ್ರಹ್ಮವೇ; ಈ ಆತ್ಮನು ಬ್ರಹ್ಮವೇ), **'ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್, ಕೇನ ಕಿಂ ಪಶ್ಯೇತ್'** (ಯಾವ ಜ್ಞಾನಿಗೆ ಇದೆಲ್ಲವೂ ಆತ್ಮವೇ ಆಗಿದೆಯೋ ಅಲ್ಲಿ ಯಾತರಿಂದ ಏನನ್ನು ಅವನು ಕಾಣಬೇಕು?), **'ಯತ್ರ ನಾನ್ಯತ್ ಪಶ್ಯತಿ, ನಾನ್ಯತ್ ಶೃಣೋತಿ, ನಾನ್ಯದ್ವಿಜಾನಾತಿ, ಸ ಭೂಮಾ, ಯೋ ವೈ ಭೂಮಾ ತದಮೃತಂ'** (ಯಾವ ಸ್ಥಿತಿಯಲ್ಲಿ ಬೇರೊಂದನ್ನು ಕಾಣುವುದಿಲ್ಲವೋ, ಬೇರೊಂದನ್ನು ಕೇಳುವುದಿಲ್ಲವೋ, ಬೇರೊಂದನ್ನು ಅರಿಯುವುದಿಲ್ಲವೋ, ಅದು 'ಭೂಮಾ'; ಭೂಮವಾಗಿ ಇರುವುದೇ ಅಮೃತವಾದದ್ದು), **'ಸರ್ವಂ ಖಲ್ವಿದಂ ಬ್ರಹ್ಮ'** (ಎಲ್ಲವೂ ಬ್ರಹ್ಮವೇ), **'ತತ್ತ್ವಮಸಿ'** (ಆ ಬ್ರಹ್ಮವೇ ನೀನಾಗಿರುವೆ), **'ಅಹಂ ಬ್ರಹ್ಮಾಸ್ಮಿ'** (ನಾನು ಬ್ರಹ್ಮವಾಗಿದ್ದೇನೆ) – ಇತ್ಯಾದಿ ವಾಕ್ಯಗಳು ಘಂಟಾಘೋಷವಾಗಿ ಭೇದನಿರಾಕರಣೆಯನ್ನು ಒತ್ತಿಹೇಳುತ್ತ ಅದ್ವೈತಸಿದ್ಧಾಂತವನ್ನು ಸಾರುತ್ತವೆ.

ಅದ್ವೈತದ ಕುರಿತು ಅತ್ಯಂತ ಪ್ರಾಚೀನ ನಿರೂಪಣೆ ಇರುವುದು ಗೌಡಪಾದರ ಕಾರಿಕೆಗಳಲ್ಲಿ. ಅವರು **ಆಗಮ, ವೈತಥ್ಯ, ಅದ್ವೈತ ಮತ್ತು ಅಲಾತಶಾಂತಿ** ಎಂಬ ನಾಲ್ಕು ಅಧ್ಯಾಯಗಳಲ್ಲಿ ಅದ್ವೈತ ಸಂಪ್ರದಾಯದ ಸಾರಸರ್ವಸ್ವವನ್ನು ಹಿಡಿದಿಟ್ಟಿದ್ದಾರೆ. **'ಅದ್ವೈತ ಕೇಸರಿ'** ಎಂದೆನಿಸಿದ ಶ್ರೀಶಂಕರ ಭಗವತ್ಪಾದರಿಗಿಂತ ಹಿಂದೆ **ಭರ್ತೃಹರಿ, ಭರ್ತೃಪ್ರಪಂಚ** ಮೊದಲಾದವರು ತಮ್ಮ ಕೃತಿಗಳಲ್ಲಿ ಅದ್ವೈತ ಸಂಪ್ರದಾಯವನ್ನು ಸ್ಪಷ್ಟ

ವಾಗಿ ನಿರೂಪಿಸಿದ್ದಾರೆ. ಶ್ರೀಶಂಕರಾಚಾರ್ಯರು ತಮಗಿಂತ ಹಿಂದೆಯೇ ಪ್ರತಿಪಾದಿತವಾದ ಈ ಅದ್ವೈತ ಸಿದ್ಧಾಂತವನ್ನೆಲ್ಲ ಸಮಗ್ರವಾಗಿ ಕ್ರೋಡೀಕರಿಸಿ, ಪ್ರಸ್ಥಾನತ್ರಯಗಳ ಮೇಲಿನ ತಮ್ಮ ಭಾಷ್ಯಗಳ ಮೂಲಕ ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಅವರ **ಉಪದೇಶಸಾಹಸ್ರಿ, ವಿವೇಕಚೂಡಾಮಣಿ** ಮೊದಲಾದ ಗ್ರಂಥಗಳು ಹಾಗೂ ಅನೇಕ ಸ್ತೋತ್ರಗಳು ಅದ್ವೈತ ಸಿದ್ಧಾಂತಕ್ಕೆ ಹಿಡಿದ ಕೈಗನ್ನಡಿಗಳಂತಿವೆ.

ಆಚಾರ್ಯ ಶಂಕರರ ನಂತರ **ಪದ್ಮಪಾದಾಚಾರ್ಯ** (ಪಂಚಪಾದಿಕಾ), **ಸುರೇಶ್ವರಾಚಾರ್ಯ** (ನೈಷ್ಕರ್ಮ್ಯಸಿದ್ಧಿ), **ವಾಚಸ್ಪತಿ ಮಿಶ್ರ** (ಭಾಮತೀ), **ಪ್ರಕಾಶಾತ್ಮ ಮುನಿ** (ವಿವರಣ), **ಚಿತ್ಸುಖಾಚಾರ್ಯ** (ತತ್ತ್ವದೀಪಿಕಾ), **ವಿದ್ಯಾರಣ್ಯ** (ಪಂಚದಶೀ, ಜೀವನ್ಮುಕ್ತಿ ವಿವೇಕ ಇತ್ಯಾದಿ), **ಮಧುಸೂದನ ಸರಸ್ವತೀ** (ಅದ್ವೈತಸಿದ್ಧಿ), **ಅಪ್ಪಯ್ಯ ದೀಕ್ಷಿತ** (ಸಿದ್ಧಾಂತಲೇಶಸಂಗ್ರಹ ಇತ್ಯಾದಿ) ಮೊದಲಾದ ಅನೇಕ ಮಂದಿ ವಿದ್ವಾಂಸರು ಅದ್ವೈತ ಸಂಪ್ರದಾಯ ಪ್ರತಿಪಾದಕ ಗ್ರಂಥಗಳನ್ನು ರಚಿಸಿ ಈ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದಾರೆ.

ಮಹಾಭಾರತದ ಪ್ರಮುಖ ಅಂಗವಾದ ಭಗವದ್ಗೀತೆ **'ಅದ್ವೈತಾಮೃತವರ್ಷಿಣೀ'** ಯಾಗಿ ಅದ್ವೈತ ಸಿದ್ಧಾಂತವನ್ನು ಎತ್ತಿ ಹಿಡಿದ ಮಹೋನ್ನತ ಗ್ರಂಥ. ಭಾಗವತದ ಹನ್ನೊಂದನೆಯ ಸ್ಕಂಧ ಅದ್ವೈತವೇದಾಂತ ಪ್ರತಿಪಾದನೆಗೆ ಮುಡಿಪಾಗಿದೆ. **'ವಾಗರ್ಥಾವಿವ ಸಂಪೃಕ್ತೌ'** ಎಂದು ವಾಗರ್ಥಗಳಲ್ಲಿ ಅದ್ವೈತವನ್ನು ಕಂಡ ಮಹಾಕವಿ ಕಾಳಿದಾಸನ ಕೃತಿಗಳು ಅಲ್ಲಲ್ಲಿ ಅದ್ವೈತತತ್ತ್ವವನ್ನು ಪ್ರತಿಪಾದಿಸಿವೆ. ಸಂಸ್ಕೃತದ ಮತ್ತೊಬ್ಬ ಮಹಾಕವಿ **ಮಾಘ** (ಶಿಶುಪಾಲ ವಧ), ನಾಟಕಕಾರರಾದ **ಭಟ್ಟನಾರಾಯಣ** (ವೇಣೀಸಂಹಾರ) ಮತ್ತು **ಕೃಷ್ಣಮಿಶ್ರ** (ಪ್ರಬೋಧ ಚಂದ್ರೋದಯ), ಕೇರಳದ ಸಂಸ್ಕೃತ ಕವಿ **ನಾರಾಯಣ ಭಟ್ಟತ್ತಿರಿ** (ನಾರಾಯಣೀಯಮ್) ಇವರೆಲ್ಲ ತಮ್ಮ ಕೃತಿಗಳಲ್ಲಿ ಅದ್ವೈತಭಾವವನ್ನು ಪ್ರಕಟಿಸಿದ್ದಾರೆ.

### ಅದ್ವೈತ ಪುಣ್ಯಕ್ಷೇತ್ರಗಳು

ಕರ್ನಾಟಕದ ಅತ್ಯಂತ ಪ್ರಾಚೀನ ಅದ್ವೈತ ಪುಣ್ಯಕ್ಷೇತ್ರವೆಂದರೆ ಚಿಕ್ಕಮಗಳೂರು ಜಿಲ್ಲೆಯ ಪವಿತ್ರಕ್ಷೇತ್ರ ಶೃಂಗೇರಿ.

ಬಳ್ಳಾರಿ ಜಿಲ್ಲೆಯ ಹಂಪಿಯ ವಿರೂಪಾಕ್ಷ ಪೀಠ, ತೀರ್ಥಹಳ್ಳಿ ಸಮೀಪದ ಮುಳುಬಾಗಿಲಿನ ಕೃಷ್ಣಾನಂದ ಮಠ, ಗಂಗೆಮಠ, ಮುಳುಬಾಗಿಲು ತಾಲೂಕಿನ ಅವನಿಮಠ, ಚಿಕ್ಕಮಗಳೂರು ಜಿಲ್ಲೆಯ ಭಂಡಿಗಡಿ ಶಕಟಪುರ ಮಠ, ಹೊಸನಗರ ಸಮೀಪದ ರಾಮಚಂದ್ರಾಪುರ ಮಠ, ತುಮಕೂರು ತಾಲೂಕು ಹೆಬ್ಬೂರಿನ ಶ್ರೀ ಕೋದಂಡಾಶ್ರಮ ಮಠ, ಮೈಸೂರು ಸಮೀಪದ ಯಡತೊರೆ ಮಠ, ಉಡುಪಿ ಜಿಲ್ಲೆಯ ಬಾಳೆಕುದ್ರಿ ಮಠ, ಶಿರಸಿ ಬಳಿಯ ಸೋಂದಾ ಸ್ವರ್ಣವಲ್ಲೀ ಮಠ, ಉತ್ತರಕನ್ನಡ ಜಿಲ್ಲೆಯ ಚಿತ್ರಾಪುರ ಮಠ, ಹಳದೀಪುರ ಮಠ ಮತ್ತು ಕರ್ಕಿ ಮಠ, ಬೆಳಗಾವಿ ಜಿಲ್ಲೆಯ ಸಂಕೇಶ್ವರ ಮಠ – ಇವೆಲ್ಲ ಕರ್ನಾಟಕದ ಪರಂಪರಾಗತ ಅದ್ವೈತ ಪುಣ್ಯಕ್ಷೇತ್ರಗಳು.




ಈ ಪ್ರಾಚೀನ ಪುಣ್ಯಕ್ಷೇತ್ರಗಳಲ್ಲದೆ ಕರ್ನಾಟಕದ ರಾಮಕೃಷ್ಣ ಆಶ್ರಮದ ಕೇಂದ್ರಗಳು, ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಮುಂತಾದ ಪ್ರದೇಶಗಳಲ್ಲಿ ಸ್ಥಾಪಿತವಾದ ಚಿನ್ಮಯ ಮಿಷನ್ ಸಂಸ್ಥೆಗಳು, ರಮಣಮಹರ್ಷಿಗಳ ಅಧ್ಯಾತ್ಮ ಕೇಂದ್ರಗಳು, ಮಹರ್ಷಿ ಮಹೇಶಯೋಗಿಗಳ ಭಾವಾತೀತ ಧ್ಯಾನ ಕೇಂದ್ರಗಳು ಇವೆಲ್ಲವೂ ಒಂದಲ್ಲ ಒಂದು ವಿಧದಲ್ಲಿ ಅದ್ವೈತ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿರುವ ಸಂಸ್ಥೆಗಳು.

### ಆಶ್ರಮದ ಕಾರ್ಯಕ್ರಮಗಳು

**ಜನವರಿ ೨೦೧೦**

| | |
|---|---|
| 01 ಶುಕ್ರವಾರ | ಕಲ್ಪತರು ದಿವಸ |
| 06 ಬುಧವಾರ | ಸ್ವಾಮಿ ವಿವೇಕಾನಂದ ಜಯಂತಿ |
| 10 ಭಾನುವಾರ | ಏಕಾದಶಿ |
| 17 ಭಾನುವಾರ | ಸ್ವಾಮಿ ಬ್ರಹ್ಮಾನಂದ ಜಯಂತಿ |
| 19 ಮಂಗಳವಾರ | ತ್ರಿಗುಣಾತೀತಾನಂದ ಜಯಂತಿ |
| 26 ಮಂಗಳವಾರ | ಏಕಾದಶಿ |
| 30 ಶನಿವಾರ | ಸ್ವಾಮಿ ಅದ್ಭುತಾನಂದ ಜಯಂತಿ |